ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ ಅಸಾಮಾನ್ಯ ಸಭೆ/56. /2021–22 ದಿನಾಂಕ: 15.06.2021

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 31.03.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 31.03.2021 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ಅಸಾಮಾನ್ಯ/2021-22 ದಿನಾಂಕ: 12.04.2021

ದಿನಾಂಕ 31.03.2021 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಡಾ:ಎನ್. ನರಸಿಂಹಮೂರ್ತಿ<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಶ್ರೀ. ಪ್ರಕಾಶ್ ಕೆ ರಾಥೋಡ್ | ಸದಸ್ಯರು |
| 3. | ಶ್ರೀ. ಕೆ ಎ ತಿಪ್ಪೇಸ್ವಾಮಿ | ಸದಸ್ಯರು |
| 4. | ಡಾ. ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 5. | ಶ್ರೀ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 6. | ಡಾ: ಶಿಂಟಿ ಆಂಟನಿ | ಸದಸ್ಯರು |
| 7. | ಶ್ರೀ. ಕೆ. ಶಿವಣ್ಣ | ಸದಸ್ಯರು |
| 8. | ಡಾ: ಅನೇಸಿಯಾ | ಸದಸ್ಯರು |
| 9. | ಶ್ರೀ. ಕೆ.ಎಂ. ಮಹೇಶ್ | ಸದಸ್ಯರು |
| 10. | ಶ್ರೀ ಸತೀಶ್ ಎಂ. | ಸದಸ್ಯರು |
| 11. | ಡಾ: ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 12. | ಡಾ. ವಿಜಯಾನಂದ ಎಸ್ | ಸದಸ್ಯರು |
| 13. | ಡಾ. ಸುಪ್ರೀತ್ ಕಿಟ್ಟನ್‌ಕೆರೆ | ಸದಸ್ಯರು |
| 14. | ಶ್ರೀ ಕುಮಾರ್ ಆರ್. ಎನ್ | ಸದಸ್ಯರು |
| 15. | ಡಾ: ವಿ.ಆರ್. ದೇವರಾಜ್ | ಸದಸ್ಯರು |
| 16. | ಡಾ: ವಿ. ಗಾಯತ್ರಿ | ಸದಸ್ಯರು |
| 17. | ಡಾ: ಎಸ್. ಹರಿಪ್ರಸಾದ್ | ಸದಸ್ಯರು |
| 18. | ಡಾ: ಪಿ. ಆರ್. ಚೇತನ | ಸದಸ್ಯರು |
| 19. | ಡಾ: ಎಂ. ಮುನಿನಾರಾಯಣಪ್ಪ | ಸದಸ್ಯರು |
| 20. | ಡಾ: ಎಂ. ಮುನಿರಾಜು | ಸದಸ್ಯರು |
| 21. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 22. | ಶ್ರೀ. ಎಂ. ಚನ್ನಕೇಶವ | ಸದಸ್ಯರು |
| 23. | ಶ್ರೀ ಸುನಿಲ್ ಎಡ್ವರ್ಡ್ ಮಂಡೇಸ್ | ಸದಸ್ಯರು |
| 24. | ಶ್ರೀ ಯೋಗೀಶ್ ಎಸ್ ರಾವ್ | ಸದಸ್ಯರು |
| 25. | ಶ್ರೀ ಆತ್ಮ ವಿ. ಹಿರೇಮಠ | ಸದಸ್ಯರು |
| 26. | ಪ್ರೊ. ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |

| | | |
|---|---|---|
| 27. | ಶ್ರೀ ಪಿ. ಎಲ್. ವೆಂಕಟೇಶಮೂರ್ತಿ<br>ವಿತ್ತಾಧಿಕಾರಿಗಳು | ಸದಸ್ಯರು |
| 28. | ಶ್ರೀಮತಿ ಆರತಿ ಆನಂದ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

**ವಿಷಯ ಸಂಖ್ಯೆ: 01 ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2021-22 ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಅನುಮೋದಿಸುವ ಬಗ್ಗೆ.**

ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರು ಸಭೆಗೆ ವಂದಿಸಿ ಕೋರಮ್ ಇಲ್ಲದೆ ಇರುವುದರಿಂದ 5 ನಿಮಿಷಗಳ ಕಾಲ ಸಭೆಯನ್ನು ಮುಂದೂಡಿರುವುದಾಗಿ ಸಭೆಗೆ ತಿಳಿಸಿದರು. 5 ನಿಮಿಷಗಳ ನಂತರ ಮುಂದೂಡಲಾದ ಸಭೆಗೆ ಕುಲಸಚಿವರು ಮತ್ತೊಮ್ಮೆ ವಂದಿಸಿ, ಮಾನ್ಯ ಕುಲಪತಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಈ ದಿನದ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಕೋರುತ್ತಿರುವುದಾಗಿ ತಿಳಿಸಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರನ್ನು ಸಭೆಗೆ ಆಹ್ವಾನಿಸಿದರು. ಮುಂದುವರೆದು ಈ ದಿನ ನಡೆಯುವ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಬಜೆಟ್‌ನ್ನು ಮಂಡಿಸಿರುವುದಾಗಿ ತಿಳಿಸಿ ಈ ಬಜೆಟನ್ನು ಆರ್ಥಿಕ ಸಮಿತಿ (Finance Committee) ಯಲ್ಲಿ ಅನುಮೋದನೆಗೊಂಡ ನಂತರ ದಿನಾಂಕ 30.03.2021 ರಂದು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸಿಂಡಿಕೇಟ್ ಸಭೆಯು ಸೂಚಿಸಿರುವಂತೆ ಬಜೆಟ್‌ನ್ನು ಅಳವಡಿಸಿ ಇಂದು ಇಲ್ಲಿ ಮಂಡಿಸಲಾಗಿದೆ ಮತ್ತು ಮಾನ್ಯ ಸದಸ್ಯರು ವಿವರವಾಗಿ ಅವಲೋಕಿಸಿ ಅವರ ಸಲಹೆಯನ್ನು ನೀಡಲು ಕೋರಿದರು ಹಾಗೂ ಈ ಬಜೆಟ್ ಬಗ್ಗೆ ಸದಸ್ಯರಾದ ವಿತ್ತಾಧಿಕಾರಿಗಳು ಕೂಲಂಕುಷವಾಗಿ ವಿವರಣೆಯನ್ನು ಸಭೆಗೆ ನೀಡುವರು ಎಂದು ಹೇಳಿ ಅವರ ಮಾತನ್ನು ಮುಗಿಸಿದರು.

(i) ಸನ್ಮಾನ್ಯ ಸದಸ್ಯರಾದ ಶ್ರೀ ಕೆ. ಎ. ತಿಪ್ಪೇಸ್ವಾಮಿರವರು ಸಿಂಡಿಕೇಟ್ ಅನುಮೋದನೆ ಪಡೆದ ನಂತರ ಇಲ್ಲಿ ಮಂಡಿಸಿರುವ ಬಗ್ಗೆ ವಿವರಣೆಯನ್ನು ನೀಡಲು ಕೋರಿದರು.

ಮಾನ್ಯ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ KSU Act 2000 ರಲ್ಲಿ 48. Financial estimates (1) The Syndicate shall prepare with the assistance of the finance officer before such date as may be prescribed by the Statutes, the financial estimates for the ensuring year and get them scrutinized by the finance committee and place the same before the Academic Council. ಆದುದರಿಂದ ಹಣಕಾಸು ಸಮಿತಿ (Finance Committee) ಯ ಒಪ್ಪಿಗೆ ಪಡೆದ ನಂತರ ಬಜೆಟನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅಲ್ಲಿ ತಿಳಿಸಲಾದಂತೆ ಮರು ಹಂಚಿಕೆ ಮಾಡಿ, ನಂತರ ಈ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು. ಆಯವ್ಯಯ ಅಂದಾಜು ಪಟ್ಟಿಯನ್ನು ಅನುಮೋದಿಸುವ ಬಗ್ಗೆ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಅನುಮೋದನೆ ಮಹತ್ವವಾಗಿರುತ್ತದೆ ಆದುದರಿಂದ ಕೂಲಂಕುಷವಾಗಿ ಪ್ರತಿಯೊಂದು ವಿಷಯವನ್ನು ಪರಾಮರ್ಶಿಸಿ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಸಭೆಯನ್ನು ಕೋರಿದರು.

(ii) ಸದಸ್ಯರಾದ ಪ್ರೊ. ಮುನಿನಾರಾಯಣಪ್ಪನವರು ಬಜೆಟ್ ಮಾಡುವಾಗ ವಾಣಿಜ್ಯ ವಿಭಾಗದವರನ್ನು ಸೇರಿಸಿಕೊಂಡಿರುವುದಿಲ್ಲ. ವಾಣಿಜ್ಯ ವಿಭಾಗದವರು ಇದ್ದರೆ ಸಾಕಷ್ಟು ಸಂದರ್ಭಗಳಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಮಟ್ಟದಲ್ಲಿ ಆಯವ್ಯಯ ಅಂದಾಜು ಪಟ್ಟಿಯನ್ನು ತಯಾರಿಸಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಭಾಧ್ಯಕ್ಷರು ಹಣಕಾಸು ಸಮಿತಿ (Finance Committee) ನಲ್ಲಿ Vice-Chancellor, Secretary to Govt. in charge of F.D or his nominee, Secretary to Govt. Higher Education, Secretary to Govt. planning Dept., one Syndicate member, one Academic Council Member, Registrar, Registrar (Evaluation) and Finance Officer ಸದಸ್ಯಕಾರ್ಯದರ್ಶಿಗಳು ಇರುತ್ತಾರೆ. ಈ ಸಮಿತಿಯಲ್ಲಿ ವಾಣಿಜ್ಯ ವಿಭಾಗದವರ ಸೇರ್ಪಡೆಗೆ ಅವಕಾಶ ಇರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಸನ್ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿ ರವರು ಸರ್ಕಾರದ ಸದಸ್ಯರಿರುವುದರಿಂದ ವಾಣಿಜ್ಯ ವಿಭಾಗದವರ ಅವಶ್ಯಕತೆ ಕಂಡು ಬರುವುದಿಲ್ಲವೆಂದು ತಿಳಿಸಿ ಸಭೆಯ ಕಾರ್ಯ ಕಲಾಪಗಳನ್ನು ಮುಂದುವರಿಸಬೇಕೆಂದು ಸಭಾಧ್ಯಕ್ಷರನ್ನು ಕೋರಿದರು.

(iii) ವಿತ್ತಾಧಿಕಾರಿಗಳಾದ ಶ್ರೀ ಪಿ ಎಲ್ ವೆಂಕಟೇಶ್‌ಮೂರ್ತಿ ರವರು ಸಭೆಗೆ ವಂದಿಸಿ ದಿನಾಂಕ 30.03.2021 ರಂದು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅವರ ಸಲಹೆಗಳನ್ನು ಆಯವ್ಯಯ ಪಟ್ಟಿಯಲ್ಲಿ ಅಳವಡಿಸಿಕೊಂಡು ಈ ಸಭೆಯಲ್ಲಿ ಮಂಡಿಸಲಾಗಿದೆ ಎಂದು ತಿಳಿಸಿದರು ಮತ್ತು ಹಣಕಾಸು ಸಮಿತಿ (Finance Committee) ಸಭೆಯಲ್ಲಿ ನೀಡಿದ ಸಲಹೆ ಸೂಚನೆಗಳನ್ನಾಧರಿಸಿ ಬ್ಯಾಲೆನ್ಸ್ ಬಜೆಟ್ ಅನ್ನು ತಯಾರಿಸಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು ಎಂದು ಸಭೆಯ ಗಮನಕ್ಕೆ ತಂದರು

ಸನ್ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿ ರವರು ಯಾವಾಗಲೂ ಬ್ಯಾಲೆನ್ಸ್ ಬಜೆಟ್ ಮಾಡಬೇಕು ಅಥವಾ ಆಯವ್ಯಯ ಪಟ್ಟಿಯಲ್ಲಿ ವ್ಯಯವನ್ನು ಹೆಚ್ಚಾಗಿ ತೋರಿಸಿ Deficit Budget ತಯಾರಿಸಬೇಕಾಗಿರುತ್ತದೆ ಎಂಬುದಾಗಿ ಸಲಹೆ ನೀಡಿದರು. ಮಾನ್ಯ ಸದಸ್ಯರ ಸಲಹೆಯಂತೆ 'Deficit Budget' ತಯಾರಿಸುವುದಾಗಿ ವಿತ್ತಾಧಿಕಾರಿಗಳು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ವಿತ್ತಾಧಿಕಾರಿಗಳು ಅವರ ಮಾತನ್ನು ಮುಂದುವರಿಸುತ್ತಾ ಈ ಆಯವ್ಯಯ ಪಟ್ಟಿಯನ್ನು ತಯಾರಿಸುವಾಗ ಪ್ರತಿಯೊಂದು ಗಮನದಲ್ಲಿ ಇರಿಸಿಕೊಂಡು ತಯಾರಿಸಲಾಗಿದೆ, ಪ್ರತಿಯೊಂದು ವಿಭಾಗದವರ ಬಳಿ ಅವರವರ ವಿಭಾಗಗಳಿಗೆ ತಗಲಬಹುದಾದ ಅಂದಾಜು ವೆಚ್ಚದ ವಿವರಗಳನ್ನು ಪಡೆಯಲಾಗಿದೆ. ಪ್ರತಿಯೊಂದು ಬಜೆಟ್ ಹೆಡ್ ಅನ್ನು ಸಿಂಡಿಕೇಟ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿದೆ ಅದರಂತೆ 2021-22 ನೇ ಸಾಲಿಗೆ ಹಂಚಿಕೆಯಾಗಿರುವ ಹಾಗೂ 2020-21ನೇ ಸಾಲಿನಲ್ಲಿ ಖರ್ಚಾಗಿರುವ ಬಾಬ್ತು ಪ್ರತಿ ಹೆಡ್ ಆಫ್ ಅಕೌಂಟ್‌ನ್ನು ಸಹ ಸಭೆಗೆ ವಿವರಿಸಲಾಗಿ ಒಟ್ಟಾರೆಯಾಗಿ 2021-22ನೇ ಸಾಲಿನ ಆಯವ್ಯಯ ಪಕ್ಷಿನೋಟ ಈ ಕೆಳಕಂಡಂತೆ ಇರುವುದಾಗಿ ಸಭೆಗೆ ತಿಳಿಸಿದರು. 2021-22ನೇ ಸಾಲಿಗೆ ಸ್ವೀಕೃತಿಗಳು ಒಟ್ಟು ರೂ.16762.25 ಲಕ್ಷಗಳು ಹಾಗೂ 2021-22ನೇ ಸಾಲಿಗೆ ಅಂದಾಜು ಖರ್ಚು ವೆಚ್ಚಗಳು ಒಟ್ಟು ರೂ. 16503.05 ಲಕ್ಷಗಳು ಹೆಚ್ಚುವರಿಯಾಗಿ ಆದಾಯ ರೂ.259.20 ಲಕ್ಷಗಳು ಎಂಬುದಾಗಿ ಸಭೆಗೆ ವಿವರಿಸಿದರು. ಮಾನ್ಯ ಸದಸ್ಯರ ಸಲಹೆಯಂತೆ Deficit Budget ತಯಾರಿಸುವುದಾಗಿ ಸಭೆಗೆ ವಿವರಿಸಿದರು.

(v) ಮಾನ್ಯ ಸದಸ್ಯರಾದ ಶ್ರೀ. ಕೆ. ಎ. ತಿಪ್ಪೇಸ್ವಾಮಿರವರು ಪ್ರತಿಯೊಂದು ಕಾಮಗಾರಿಗಳನ್ನು ಆಯಾಯಾ ವರ್ಷಗಳಲ್ಲಿ ಮುಗಿಸಿಕೊಳ್ಳುವುದು ಒಳ್ಳೆಯದು. ಹಿಂದಿನ ವರ್ಷದ ರಿಪೇರಿ ಕಾಮಗಾರಿ ಕೆಲಸಗಳನ್ನು ಮುಂದಿನ ವರ್ಷದ ಆಯವ್ಯಯ ಅಂದಾಜು ಪಟ್ಟಿಯಲ್ಲಿ ತರುವುದು ಒಳ್ಳೆಯ ಅಭ್ಯಾಸವಲ್ಲ ಅಭಿಯಂತರ ವಿಭಾಗದವರ ಕಡೆಯಿಂದ ಎಲ್ಲಾ ಕೆಲಸಗಳನ್ನು ತ್ವರಿತಗತಿಯಲ್ಲಿ ಮುಗಿಸಿಕೊಳ್ಳಬೇಕು. ಹೊರಗುತ್ತಿಗೆಯಲ್ಲಿ ಅಭಿಯಂತರರುಗಳನ್ನು ನೇಮಕ ಮಾಡಿಕೊಂಡು ಕಾಮಗಾರಿ ಕೆಲಸಗಳನ್ನು ಮುಗಿಸಿಕೊಳ್ಳಲು ಸೂಚಿಸಿದರು. ಅವರ ಮಾತನ್ನು

ಮುಂದುವರಿಸುತ್ತ ವಿದ್ಯಾರ್ಥಿಗಳ Grievance Cell ನ್ನು ಸ್ಥಾಪನೆ ಮಾಡಿ, ಯುವಕರನ್ನು ನೇಮಕ ಮಾಡಿ ಸಕಾಲದಂತೆ ಕಾರ್ಯ ನಿರ್ವಹಿಸಲು ಕ್ರಮ ಜರುಗಿಸಬೇಕೆಂದು ತಿಳಿಸಿದರು.

ಸಭಾಧ್ಯಕ್ಷರು ಈಗಾಗಲೆ ಬೆಂಗಳೂರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ ಹೊಂದಿರುವ ಸಹಾಯಕ ಅಭಿಯಂತರ ರವರ ಜೊತೆಗೆ ಒಬ್ಬ ಇಂಜಿನಿಯರ್ ರವರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ. ಇವರಗಳು ಪ್ರಸ್ತುತ ಆ ವಿಭಾಗದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ ಬಾಕಿ ಇರುವ ಕಾಮಗಾರಿಗಳನ್ನು ಅನಿವಾರ್ಯವಾಗಿ 2021–22 ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಅಂದಾಜಿಸಿ ರೂ. 600.00 ಲಕ್ಷಗಳು ನಿಗದಿ ಮಾಡಲಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳ Grievance Cell ಅನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದು ಕ್ರಮವಹಿಸಲಾಗುವುದಾಗಿ ಸಭೆಗೆ ತಿಳಿಸಿದರು.

(vi) ಮಾನ್ಯ ಸದಸ್ಯರಾದ ಶ್ರೀ ಹೆಚ್ ಆರ್ ಸತೀಶ್ ರವರು ಸರ್ಕಾರದಿಂದ ನಿರೀಕ್ಷಿಸಲಾದ ಅನುದಾನದಲ್ಲಿ ಕೈಗೊಳ್ಳಲಾಗುವ ವಿದ್ಯಾರ್ಥಿನಿಲಯಗೆ ಮಾತ್ರ ಸಂಬಂಧಿಸಿದಂತೆ, ಇದು ಬರೀ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರವೇ ಅಥವಾ ಸಂಯೋಜನೆಗೊಂಡ ಕಾಲೇಜುಗಳ ವಿದ್ಯಾರ್ಥಿಗಳಿಗೂ ಸಹ ಅನುಕೂಲವಾಗಬಹುದೆ ಎಂದು ಕೇಳಿದರು.

(vi) ಮಾನ್ಯ ಸದಸ್ಯರಾದ ಪ್ರೊ ಕೆ ಎಂ ಮಹೇಶ್ ರವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮೌಲ್ಯಮಾಪನಕ್ಕೆ ರೂ. 1,250/– ಕ್ಕಿಂತ ಹೆಚ್ಚು ಸಂಭಾವನೆ ನೀಡಲಾಗುತ್ತಿದೆ ಆದರೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ರೂ.900/– ನ್ನು ನೀಡುತ್ತಿದೆ. ಈ ತಾರತಮ್ಯವನ್ನು ಸರಿಪಡಿಸಬೇಕೆಂದು ಮನವಿ ಮಾಡಿದರು.

ಸಭಾಧ್ಯಕ್ಷರು ಇದಕ್ಕೆ ಉತ್ತರಿಸುತ್ತ, ಇಲ್ಲಿಂದ ಜ್ಞಾನಭಾರತಿಗೆ ಹೋಗುವುದಕ್ಕೆ ಆಟೋ ಶುಲ್ಕ (Auto charge) ರೂ. 300/–ಗಳನ್ನು ನೀಡಲಾಗುತ್ತಿದೆ. ಆದುದರಿಂದ ವ್ಯತ್ಯಾಸ ಇರುತ್ತದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿ ರವರು ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಒಂದೇ ರೀತಿ ಸಂಭಾವನೆ ಇರಬೇಕು. ಅದರಂತೆ on par with Bangalore University ಮಾಡಿಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಕುಲಸಚಿವರು (ಮೌಲ್ಯಮಾಪನ) ರವರು ವಿಷಯವನ್ನು ಗಮನಕ್ಕೆ ತೆಗೆದುಕೊಂಡಿರುವುದಾಗಿ ತಿಳಿಸಿ ವಿವರಗಳನ್ನು ಪಡೆದು ತಾರತಮ್ಯ ಕಂಡು ಬಂದರೆ ಅದನ್ನು ಆದಷ್ಟು ಬೇಗ ಪರಿಹರಿಸಲು ಕ್ರಮ ಜರುಗಿಸಲಾಗುವುದು ಎಂದು ಸಭೆಗೆ ತಿಳಿಸಿದರು.

(viii) ಮಾನ್ಯ ಸದಸ್ಯರಾದ ಶ್ರೀ ಸುನೀಲ್ ಎಡ್ವರ್ಡ್ ಮಾಂಡೆಸ್ ಮಾತನಾಡುತ್ತ ಹೆಡ್ ಆಫ್ ಅಕೌಂಟ್ 029 ರಲ್ಲಿ providing, Installing and Commissioning of Solar power plant at central college ಎಂಬುದಾಗಿ ಇರುವ ಶೀರ್ಷಿಕೆಯನ್ನು 040 (b) ರಲ್ಲಿ ಮತ್ತೊಮ್ಮೆ ತೋರಿಸಲಾಗಿದೆ, ಒಂದು ಕಡೆ ಮಾತ್ರ ಇರಬೇಕು ಎಂದು ತಿಳಿಸಿದರು. ವಿತ್ತಾಧಿಕಾರಿಗಳು ಅವರು ತಿಳಿಸಿರುವ ಆಕ್ಷೇಪಣೆಯನ್ನು ಸರಿಪಡಿಸಿಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

(ix) ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ರವರು ಮಾತನಾಡುತ್ತ ರೂ. 8000.00 ಲಕ್ಷಗಳನ್ನು Redevelopment of BCU Campus ಅಡಿ ನಿಗದಿಪಡಿಸಲಾಗಿದೆ ಆದರೆ 043(a) providing basic

facilities to the playground ಗೆ 2020-21 ನೇ ಸಾಲಿನಲ್ಲಿ ರೂ. 100.00 ಲಕ್ಷಗಳು ಎಂಬುದಾಗಿ ತೋರಿಸಲಾಗಿದೆ ಆದರೆ 2021-22 ನೇ ಸಾಲಿಗೆ ಹಣವನ್ನು ನಿಗದಿ ಮಾಡಿರುವುದಿಲ್ಲ ಇದನ್ನು ಗಮನಿಸಬೇಕು ಎಂದು ಅವರ ಅಭಿಪ್ರಾಯವನ್ನು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಉತ್ತರಿಸುತ್ತಾ ಮಾಸ್ಟರ್ ಪ್ಲಾನ್‌ಗೆ ರೂ. 155.00 ಕೋಟಿ ಹಣವನ್ನು ಕಾಯ್ದಿರಿಸಲಾಗಿದೆ ಎಂದು ತಿಳಿಸಿ ಮಾಸ್ಟರ್ ಪ್ಲಾನ್ ನಕ್ಷೆಯನ್ನು ಮುಖ್ಯ ವಾಸ್ತುಶಿಲ್ಪಿ (Chief Architect) ರವರು ತಯಾರಿಸಿ ಕೊಟ್ಟಿದ್ದಾರೆ ಅ ನಕ್ಷೆಯಲ್ಲಿ ಇವುಗಳೆಲ್ಲವೂ ಇರುವುದಾಗಿ ತಿಳಿಸಿದರು.

(x) ಮಾನ್ಯ ಅಧ್ಯಕ್ಷಕರು ಮುಂದುವರೆದು ಯೂ.ವಿ.ಸಿ.ಇ ಹಾಸ್ಟಲ್ ಬಳಿ ಇರುವ ಜಾಗದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸರ್ಕಾರವು ವಿದ್ಯಾರ್ಥಿನಿಲಯದ ಕಟ್ಟಡವನ್ನು ನಿರ್ಮಾಣ ಮಾಡಿಕೊಡುತ್ತಿದೆ. ಈ ಸ್ಥಳವು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸೇರಿರುವುದರಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ಅನುವು ಮಾಡಿಕೊಡಲು ಸರ್ಕಾರದಿಂದ ಅನುಮತಿ ಪಡೆಯಲಾಗುವುದು ಎಂದು ತಿಳಿಸಿದರು. 1000 ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದೆ. ಅದರಲ್ಲಿ 500 ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡಲು ಸಂಬಂಧಿಸಿದವರಿಂದ ಅನುಮತಿ ಪಡೆಯಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿರವರು ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ನಿರ್ಮಿಸಬೇಕು. ಬೆಂಗಳೂರಿನ ಹೊರವಲಯದಲ್ಲಿ ಬೇಕಾದಷ್ಟು ಜಾಗ ಸಿಗುತ್ತದೆ. ಈ ವಿಷಯವಾಗಿ ಬಿಡಿಎ ಆಯುಕ್ತ ರವರ ಬಳಿ ಮಾತನಾಡಿ ಸರ್ಕಾರದಿಂದ ಆ ಜಾಗವನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಒದಗಿಸಲು ಕ್ರಮ ಜರುಗಿಸಲು ತಿಳಿಸಿದರು ಹಾಗೂ ಜಾಗವನ್ನು ಗುರುತಿಸಲು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ರವರು ಮಾತನಾಡುತ್ತ ಯಲಹಂಕ ಬಳಿ ಜಾಗ ಸಿಗಬಹುದು ಎಂದು ಅಭಿಪ್ರಾಯಪಟ್ಟರು. ತತ್ಸಂಬಂಧ ಕ್ರಮ ಕೈಗೊಳ್ಳುವುದಾಗಿ ಸಭಾಧ್ಯಕ್ಷರು ಸಭೆಗೆ ತಿಳಿಸಿದರು.

(xi) ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿರವರು ಒಂದು ಎಕ್ಸಿಕ್ಯೂಟಿವ್ ಇಂಜಿನಿಯರ್, ಒಂದು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಇಬ್ಬರು ಅಸಿಸ್ಟೆಂಟ್ ಇಂಜಿನಿಯರ್ ರವರನ್ನು ನೇಮಿಸಿಕೊಳ್ಳಲು ಸಾಧ್ಯತೆ ಇದ್ದರೆ, ನೇಮಕ ಮಾಡಿಕೊಳ್ಳಲು ಕ್ರಮ ಜರುಗಿಸಬಹುದು ಎಂದು ಅವರ ಅಭಿಪ್ರಾಯ ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತ ಸರ್ಕಾರವು ಈ ಹುದ್ದೆಗಳಿಗೆ ಅನುಮತಿ ನೀಡಿರುವುದಿಲ್ಲ ಹಾಗೂ ನೇಮಕಾತಿ ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ ಎಂದು ವಿವರಿಸಿದರು.

(xii) ಮಾನ್ಯ ಸದಸ್ಯರಾದ ಪ್ರೊ ಮುನಿನಾರಾಯಣಪ್ಪ ರವರು ಎಂ.ಕಾಮ್, ಎಂ.ಬಿ.ಎ, ಎಂ.ಟಿ.ಟಿ.ಎಂ, ಎಂ.ಟಿ.ಟಿ.ಬಿ, ಕೋರ್ಸುಗಳಿಗೆ ಕಂಪ್ಯೂಟರ್ ಲ್ಯಾಬ್ ಅಗತ್ಯವಿರುವುದರಿಂದ ಆಯವ್ಯಯದ ಪಟ್ಟಿಯಲ್ಲಿ ಹೆಚ್ಚುವರಿ ಹಣವನ್ನು ನಿಗದಿ ಪಡಿಸಬೇಕು ಎಂದು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಎಲ್ಲಾ ವಿಭಾಗದ ಕಂಪ್ಯೂಟರ್ ಲ್ಯಾಬ್‌ಗಳಿಗೆ ಗಣಕ ಯಂತ್ರಗಳನ್ನು ಒದಗಿಸಲು ಪ್ರತ್ಯೇಕವಾಗಿ ಬಜೆಟ್‌ನಲ್ಲಿ ಹಣವನ್ನು ನಿಗದಿಪಡಿಸಲಾಗಿದೆ. ಆ ಬಜೆಟ್ ಅಡಿಯಲ್ಲಿ ಗಣಕ ಯಂತ್ರಗಳನ್ನು ಒದಗಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು. ಸದ್ಯಕ್ಕೆ ಗಣಕಯಂತ್ರಗಳನ್ನು ಒದಗಿಸದೆ ಇರುವ ಕಾರಣ ರಿಪೇರಿ ಕಾಮಗಾರಿ ಕೆಲಸಗಳು ನಡೆಯುವ ಸಂದರ್ಭದಲ್ಲಿ ಗಣಕಯಂತ್ರಗಳು ಹಾಳಾಗುವ ಸಂಭವವಿರುತ್ತದೆ. ರಿಪೇರಿ

ಕಾಮಗಾರಿ ಕೆಲಸಗಳನ್ನು ಕೈಗೊಂಡು ಅವು ಮುಗಿದನಂತರ ಆಯಾಯ ವಿಭಾಗಗಳ ಬೇಡಿಕೆಗೆ ಅನುಗುಣವಾಗಿ ಗಣಕ ಯಂತ್ರಗಳನ್ನು ಒದಗಿಸಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

(xiii) ಮಾನ್ಯ ಸದಸ್ಯರಾದ ಪ್ರೊ ಮುನಿನಾರಾಣಪ್ಪರವರು ಸಿಬಿಎಸ್‌ಎಂಎಸ್ ಕಟ್ಟಡಕ್ಕೆ ಕೆನರಾ ಬ್ಯಾಂಕ್ ಹಣ ನೀಡಿರುವುದರಿಂದ ಹೆಸರನ್ನು ಹಾಗೆಯೇ ಉಳಿಸಿಕೊಳ್ಳಬೇಕು ಮತ್ತು ಅದೇ ಹೆಸರು ರಾಜ್ಯದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಟ್ಟಿದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸಭಾಧ್ಯಕ್ಷರು ಕೆನರಾ ಬ್ಯಾಂಕ್ ರವರು ಇಟ್ಟಿದ್ದ ಹಣವನ್ನು ಹಿಂಪಡೆದಿದ್ದಾರೆ ಅವರ ಯಾವುದೇ ಹಣ ವಿಶ್ವವಿದ್ಯಾನಿಲಯದಲ್ಲಿ ಇರುವುದಿಲ್ಲ ಆದುದರಿಂದ ಸಿಬಿಎಸ್‌ಎಂಎಸ್ ಹೆಸರನ್ನು ಬದಲಾಯಿಸಬಹುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿರವರು ಈಗ ಇರುವ ಹೆಸರನ್ನು ಮುಂದುವರೆಸಬಹುದು ಎಂದು ಅಭಿಪ್ರಾಯಟ್ಟರು

(xiv) ಮಾನ್ಯ ಸದಸ್ಯರಾದ ಪ್ರೊ. ಎಂ. ಚಿಕ್ಕಮುನಿಯಪ್ಪನವರು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಸದಸ್ಯರಿಗೆ ನೀಡುತ್ತಿರುವ (sitting fees) ಗೌರವಧನವನ್ನು ಹೆಚ್ಚಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿರವರು ಗೌರವಧನವನ್ನು ನಿಶ್ಚಯಿಸುವಾಗ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ನೀಡುತ್ತಿರುವ ಬಗ್ಗೆ ವಿವರಗಳು ಪಡೆದು, ಒಂದೇ ಸಮನಾಗಿ (on par) ನಿಶ್ಚಯಿಸಲು ತಿಳಿಸಿದರು.

(xv) ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಸಭೆಯಲ್ಲಿ ಕಂಡು ಬಂದ ವಿಷಯವೇನೆಂದರೆ ಬೇರೆ ಬೇರೆ ವಿಭಾಗಗಳ ಅಧ್ಯಾಪಕರುಗಳಲ್ಲಿ ಸಮನ್ವಯ ಇಲ್ಲ ಮೊದಲು ಅದನ್ನು ಸರಿ ಮಾಡಿಕೊಳ್ಳಲು ತಿಳಿಸಿದರು ಗೊಂದಲ ಯಾವುದೇ ಇದ್ದರು ಮಾತನಾಡಿ ಸರಿಪಡಿಸಿಕೊಳ್ಳಬೇಕು ಒಗ್ಗಟ್ಟಿನಿಂದ ವಿಶ್ವವಿದ್ಯಾನಿಲಯದ ಕೆಲಸಗಳನ್ನು ನಿರ್ವಹಿಸಬೇಕು ಸರ್ಕಾರದ ಪ್ರತಿನಿಧಿಗಳಿಂದ ಹಾಗೂ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿ ರವರು ಯಾವಾಗ ಅವರ ಅವಶ್ಯಕತೆ ಕಂಡು ಬಂದಲ್ಲಿ ಅವರುಗಳನ್ನು ಆಹ್ವಾನಿಸಿದರೆ, ಅವರುಗಳು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಜೊತೆಗೂಡಿ ಸರ್ಕಾರದಲ್ಲಿ ಆಗಬೇಕಾಗಿರುವ ಕೆಲಸಗಳನ್ನು ಮಾಡಿಸಿಕೊಡಲು ಶಿಫಾರಸ್ಸು ಮಾಡುವುದಾಗಿ ಅಭಿಪ್ರಾಯ ಪಟ್ಟರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿ ರವರು ಅವರ ಸಹಮತಿಯನ್ನು ಸೂಚಿಸಿದರು. ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ರವರು ಅವರು ಮಾತನ್ನು ಮುಂದುವರೆಸುತ್ತಾ ಅವರು ಇದೇ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿರುವುದಾಗಿ ತಿಳಿಸುತ್ತಾ ಆದಷ್ಟು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗುಣಮಟ್ಟವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಸಲು ಗಮನ ಹರಿಸುವುದು ಅತ್ಯವಶ್ಯಕ ಎಂದು ಅವರ ಅಭಿಪ್ರಾಯ ತಿಳಿಸಿದರು. ಸಭಾಧ್ಯಕ್ಷರು ಸಹಮತ ವ್ಯಕ್ತಪಡಿಸಿದರು.

(xvi) ಮಾನ್ಯ ಸದಸ್ಯರಾದ ಪ್ರೊ. ಎಂ. ಚಿಕ್ಕಮುನಿಯಪ್ಪನವರು ಮಾತನಾಡುತ್ತಾ ಬೋದಕೇತರ ನೌಕರರು ಇಲ್ಲದೇ ಇರುವುದರಿಂದ ಬೋದಕೇತರ ನೌಕರರನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಕೆ ಎ ತಿಪ್ಪೇಸ್ವಾಮಿರವರು, ಸರ್ಕಾರದಲ್ಲಿ ಈ ಬಗ್ಗೆ ಅವರು ಮಾತನಾಡುವುದಾಗಿ ತಿಳಿಸಿ, ಸರ್ಕಾರವು ಹೊರಡಿಸಿರುವ ಹುದ್ದೆಗಳ ಮಂಜೂರಾತಿ ಆದೇಶ ಪ್ರತಿಯನ್ನು ಅವರಿಗೆ ತಲುಪಿಸಲು ತಿಳಿಸಿದರು.

ಅವರ ಮಾತನ್ನು ಮುಂದುವರೆಸುತ್ತಾ ಡಿಜಿಟಲ್ ಲೈಬ್ರರಿ (Digital library) ಮಾಡಿ Journals / Periodicals ನ್ನು ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ತರಿಸಿಕೊಳ್ಳವುದು ಒಳ್ಳೆಯದು ಎಂದು ಅಭಿಪ್ರಾಯ ಪಟ್ಟರು.

ಸಭಾಧ್ಯಕ್ಷರು ಒಳ್ಳೆಯ ಸಲಹೆಯಾಗಿದ್ದು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

(xvii) Skill Development ನ ಅಡಿಯಲ್ಲಿ Diploma, PG Diploma, Certificate Courses ಅನ್ನು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪರಿಚಯಿಸಿ ಎಂಬುದಾಗಿ ಸಲಹೆ ನೀಡಿದರು.

ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವುದಾಗಿ ಸಭಾಧ್ಯಕ್ಷರು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ವಿಜಯಾನಂದ ಎಸ್ ರವರು Health Centre ಗೆ sanction post ಇಲ್ಲ ಎಂದಾದರೆ, deputation ಮಾಡಿಕೊಂಡು Govt. Scale salary ಕೊಡಬಹುದು ಎಂದು ಅಭಿಪ್ರಾಯಪಟ್ಟರು.

ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವುದಾಗಿ ಸಭಾಧ್ಯಕ್ಷರು ಸಭೆಗೆ ತಿಳಿಸಿದರು.

**ನಿರ್ಣಯ: ಹಣಕಾಸು ಸಮಿತಿ, ಸಿಂಡಿಕೇಟ್ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ತುಗಳು ನೀಡಲಾದ ಸಲಹೆ, ಸೂಚನೆ, ಮಾರ್ಗದರ್ಶನ ಹೊಸ ವಿಷಯಗಳಿಗೆ ಬಜೆಟ್ ಹಂಚಿಕೆ, ಬಜೆಟ್ ಮಾರ್ಪಡಿಕೆ, ಬಜೆಟ್ ಹಂಚಿಕೆ, ಬಜೆಟ್ ಹೆಚ್ಚಿಸುವಿಕೆ ಇತ್ಯಾದಿಗಳನ್ನು ಅಳವಡಿಸಿಕೊಂಡು Deficit Budget ತಯಾರಿಗೆ ಮತ್ತು Deficit Budget ನ್ನು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ 2021-22 ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಅನುಮೋದಿಸಿತು.**

ವಿಷಯ ಸಂಖ್ಯೆ 2, 3 ಹಾಗೂ 4 ಇವುಗಳು ವಿದ್ಯಾವಿಷಯಕ ಪರಿಷತ್ತಿನ ವ್ಯಾಪ್ತಿಗೆ ಒಳಪಡದಿರುವುದರಿಂದ ಸದರಿ ವಿಷಯಗಳ ಬಗ್ಗೆ ಚರ್ಚಿಸುವುದು ಬೇಕಾಗಿರುವುದಿಲ್ಲ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳ ನಿರ್ಣಯದಂತೆ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು.

ಕುಲಸಚಿವರು ವಂದಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು
12/04/2021